## ಈ ಲೇಖನದ ವಿಷಯಾನುಕ್ರಮಣಿಕೆ


**ಈ ಬಾರಿಯ ಕೃಷ್ಣಾಷ್ಟಮೀ ನಿರ್ಣಯ** 2

ಭಾನುವಾರದಂದು ಕೃಷ್ಣಜಯಂತಿ, ಉಪವಾಸ, ಅರ್ಘ್ಯ 2

ಅಷ್ಟಮೀ ಅರ್ಧರಾತ್ರವ್ಯಾಪಿನಿಯಾಗಿರಬೇಕು 3

ಅಷ್ಟಮೀ ರೋಹಿಣೀ ದೊರೆತಾಗ ಸಪ್ತಮೀವೇಧ ದೋಷವಲ್ಲ 5

ಸೋಮವಾರದಂದು ಜಯಂತೀ ಆಚರಿಸಬಾರದು 6

**ಅರ್ಘ್ಯಪ್ರದಾನ** 8

**ಪಾರಣೆಯ ವಿಚಾರ** 9

ಅಶಕ್ತರು ಪ್ರಾತಃಪಾರಣೆಯನ್ನು ಮಾಡಬಹುದು 10

**ಸಮಗ್ರ ಆಚರಣೆಯ ಸಮಯಗಳು** 14

## ಈ ಬಾರಿಯ ಕೃಷ್ಣಾಷ್ಟಮೀ ನಿರ್ಣಯ

ಶ್ರೀ ವಿಲಂಬಿನಾಮ ಸಂವತ್ಸರದ ಶ್ರಾವಣ ಕೃಷ್ಣಾಷ್ಟಮಿ [2018] ಯಾವತ್ತು ಆಚರಿಸಬೇಕು ಎಂದು ಹಲವಾರು ಜನರು ಪ್ರಶ್ನೆ ಕೇಳುತ್ತಿದ್ದಾರೆ.

ನಮ್ಮ ಪ್ರಾಚೀನ ಆಚಾರ್ಯರು ನೀಡಿದ ಉತ್ತರವನ್ನು ಅವರ ಪಾದಸ್ಮರಣೆಯೊಂದಿಗೆ ತಿಳಿಯೋಣ.

### ಭಾನುವಾರದಂದು ಕೃಷ್ಣಜಯಂತಿ, ಉಪವಾಸ, ಅರ್ಘ್ಯ

ಈ ಬಾರಿ ಭಾನುವಾರ [2-9-2018] ಸಂಜೆ ಸುಮಾರು 5-01 PM ರ ವೇಳೆಗೆ ಅಷ್ಟಮೀ ತಿಥಿ ಆರಂಭವಾಗಿ, ಸೋಮವಾರ [3-9-2018] ಸಂಜೆ 3-25 PM ಗೆ ಮುಗಿಯುತ್ತದೆ. ಹಾಗೆಯೇ ರೋಹಿಣೀ ನಕ್ಷತ್ರವು ಭಾನುವಾರ ಸಂಜೆ  6-23 ಕ್ಕೆ

ಆರಂಭವಾಗಿ  ಸೋಮವಾರ ಸಂಜೆ 5-29ಕ್ಕೆ ಮುಗಿಯುತ್ತದೆ.

## ಅಷ್ಟಮೀ ಅರ್ಧರಾತ್ರವ್ಯಾಪಿನಿಯಾಗಿರಬೇಕು

ಕೃಷ್ಣಾಷ್ಟಮಿಯನ್ನು ಆಚರಿಸಲು ಅಷ್ಟಮೀ ಯಾವ ರೀತಿ ಇರಬೇಕು ಎಂಬ ಪ್ರಶ್ನೆಗೆ ಸ್ವಯಂ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಹೇಳಿರುವ **"ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಳಾಷ್ಟಮೀ ಭವೇತ್"** ಎಂಬ ವಚನದ ಆಧಾರದ ಮೇಲೆ  ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರು ಉತ್ತರ ನೀಡಿದ್ದಾರೆ — **ಶ್ರಾವಣಕೃಷ್ಣಾಷ್ಟಮೀ ಅರ್ಧರಾತ್ರವ್ಯಾಪಿನೀ ಗ್ರಾಹ್ಯಾ** ಎಂದು.

ಕೃಷ್ಣಾಷ್ಟಮಿಯನ್ನು ಆಚರಿಸಲು ಮುಖ್ಯವಾದ ಸಮಯ ಅರ್ಧರಾತ್ರಿಯಲ್ಲಿ ಅಷ್ಟಮಿ ಇರಬೇಕು. ಕಾರಣ ಭಗವಂತ ಅವತರಿಸಿದಾಗ ಅದೇ ರೀತಿ ಇದ್ದದ್ದು.

ಅರ್ಧರಾತ್ರಿಯಲ್ಲಿ ದೊರೆಯದೇ ಇದ್ದಾಗ, ರಾತ್ರಿಯಲ್ಲಾದರೂ ಇರಬೇಕು. ರಾತ್ರಿಯಲ್ಲಿಯೂ ಇಲ್ಲದಾಗ, ಸಂಜೆಯಲ್ಲಾದರೂ ಇರಬೇಕು. ಸಂಜೆಯೂ ದೊರೆಯದಾಗ ಮಧ್ಯಾಹ್ನದಲ್ಲಿ ಅಥವಾ ಸೂರ್ಯೋದಯದ ಸಮಯಕ್ಕಾದರೂ ಇರಬೇಕು.

ಈ ಬಾರಿ ಮುಖ್ಯಕಾಲವೇ ದೊರೆತಿದೆ. ಭಾನುವಾರ ಮಧ್ಯರಾತ್ರಿಯಲ್ಲಿ ಅಷ್ಟಮಿ ಇದೆ. ಹೀಗಾಗಿ ಭಾನುವಾರದಂದೇ ಕೃಷ್ಣಾಷ್ಟಮೀ ಆಚರಣೆ.

ಅಷ್ಟೇ ಅಲ್ಲ, ಮಧ್ಯರಾತ್ರಿಯಲ್ಲಿ ಅಷ್ಟಮಿಯ ಜೊತೆಯಲ್ಲಿ ರೋಹಿಣಿಯೂ ಇದ್ದರೆ, ಅದು ಕೇವಲ ಕೃಷ್ಣಾಷ್ಟಮಿಯಲ್ಲ, ಕೃಷ್ಣ ಜಯಂತಿ. ಈ ಬಾರಿ ಭಾನುವಾರ ಮಧ್ಯರಾತ್ರಿಯಲ್ಲಿ ರೋಹಿಣಿಯೂ ಇರುವದರಿಂದ ಇದು ಕೃಷ್ಣಜಯಂತೀ.

## ಅಷ್ಟಮೀ ರೋಹಿಣೀ ದೊರೆತಾಗ ಸಪ್ತಮೀವೇಧ ದೋಷವಲ್ಲ

ಇಲ್ಲೊಂದು ತೊಡಕಿದೆ. ಅಷ್ಟಮಿಯು ಸಪ್ತಮೀವಿದ್ಧವಾಗಿದ್ದರೆ ಉಪವಾಸ ಮಾಡಬಾರದು ಎಂದು. ಆ ತೊಡಕನ್ನು ಶ್ರೀ ಕೃಷ್ಣಾಚಾರ್ಯರು ಸ್ಮೃತಿಮುಕ್ತಾವಲಿಯಲ್ಲಿ ಆದಿತ್ಯಪುರಾಣದ ವಚನವನ್ನು ಉದಾಹರಿಸಿ ಪರಿಹರಿಸಿದ್ದಾರೆ — **ಕಾರ್ಯಾ ವಿದ್ಧಾಪಿ ಸಪ್ತಮ್ಯಾ ರೋಹಿಣೀಸಂಯುತಾಷ್ಟಮೀ** ಎಂದು. ಮಧ್ಯರಾತ್ರಿಯಲ್ಲಿ ಅಷ್ಟಮೀ, ರೋಹಿಣೀ ಎರಡೂ ದೊರೆಯುವದಾದರೆ ಸಪ್ತಮೀವೇಧದ ದೋಷವಿಲ್ಲ ಎಂದು.

ಹೀಗಾಗಿ ಭಾನುವಾರವೇ ಕೃಷ್ಣಜಯಂತಿಯ ಆಚರಣೆ.

## ಸೋಮವಾರದಂದು ಜಯಂತೀ ಆಚರಿಸಬಾರದು

ಸೋಮವಾರದಂದು ಸೂರ್ಯೋದಯಕ್ಕೆ ಅಷ್ಟಮೀ ಇದೆ ನಿಜ. ಆದರೆ ಅದು ಆ ದಿವಸ ಮಧ್ಯಾಹ್ನ ಮೂರಕ್ಕೇ ಮುಗಿಯುತ್ತದೆ. ಸಂಜೆಯೂ ಅಷ್ಟಮಿಯಿಲ್ಲ. ರಾತ್ರಿಯೂ ಇಲ್ಲ. ಅರ್ಧರಾತ್ರಿಯಂತೂ ಇಲ್ಲವೇ ಇಲ್ಲ. ಹೀಗಾಗಿ ಸರ್ವಥಾ ಸೋಮವಾರದಂದು ಉಪವಾಸ ಮಾಡಬಾರದು.

**ಕರ್ಮಣೋ ಯಸ್ಯ ಯಃ ಕಾಲಃ**
**ತತ್ಕಾಲವ್ಯಾಪಿನೀ ತಿಥಿಃ**
**ತಯಾ ಕರ್ಮಾಣಿ ಕುರ್ವೀತ**
**ಹ್ರಾಸವೃದ್ಧೀ ನ ಕಾರಣಮ್**

ಎಂಬ ವಿಷ್ಣುಧರ್ಮೋತ್ತರವಚನ ಸ್ಪಷ್ಟವಾಗಿ ಯಾವ ಕರ್ಮವನ್ನು ಯಾವ ಕಾಲದಲ್ಲಿ ಮಾಡಬೇಕು ಆ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟತಿಥಿ ಇರಬೇಕು ಎಂದು ತಿಳಿಸುತ್ತದೆ.

ಕೃಷ್ಣಾಷ್ಟಮೀ ಅರ್ಧರಾತ್ರಿಯಲ್ಲಿ ಆಚರಿಸಬೇಕಾದ ಸತ್ಕರ್ಮ. ಹೀಗಾಗಿ ಅರ್ಧರಾತ್ರಿಯಲ್ಲಿ ಅಷ್ಟಮೀ ಇದ್ದಾಗಲೇ ಅದನ್ನು ಆಚರಿಸಬೇಕು. ಅದು ದೊರೆಯದೇ ಇದ್ದಾಗ ಗೌಣ ಕಾಲಗಳನ್ನು ಅನುಸರಿಸಬೇಕು.

## ಅರ್ಘ್ಯಪ್ರದಾನ

ಚಂದ್ರೋದಯವಾದ ಬಳಿಕ ಅರ್ಘ್ಯಪ್ರದಾನ. ಈ ಬಾರಿ ದಕ್ಷಿಣ ಭಾರತದಲ್ಲಿ ಚಂದ್ರೋದಯ ಸುಮಾರು 11-20 ರಿಂದ ಆರಂಭಿಸಿ 11-50 ರ ವರೆಗೆ ಆಗುತ್ತದೆ. ಬೆಂಗಳೂರಿನಲ್ಲಿ 11:39 ಕ್ಕೆ. ಮೈಸೂರಿನಲ್ಲಿ 11:40ಕ್ಕೆ. ನೀವಿರುವ ಊರಿನ ಚಂದ್ರೋದಯವನ್ನು ಇಂಟರ್ನೆಟ್ಟಿನ ಮುಖಾಂತರ ಸುಲಭವಾಗಿ ತಿಳಿಯಬಹುದು.

ಚಂದ್ರೋದಯವಾದ ತಕ್ಷಣ ದೇವರಿಗೆ ಅರ್ಘ್ಯವನ್ನು ನೀಡಿ ನಂತರ ಚಂದ್ರನಿಗೆ ಅರ್ಘ್ಯವನ್ನು ನೀಡಬೇಕು.

ಅರ್ಘ್ಯ ನೀಡುವ ಸಮಗ್ರ ಕ್ರಮವನ್ನು ಅನುಸಂಧಾನದೊಂದಿಗೆ ಆಡಿಯೋ ಮಾಡಿ ವಿಶ್ವನಂದಿನಿಯಲ್ಲಿ ಪ್ರಕಟಿಸಿದ್ದೇನೆ. ಕೇಳುತ್ತ ಅರ್ಘ್ಯನೀಡಬಹುದು. ಲಿಂಕ್ ಇಲ್ಲಿದೆ —

**http://vishwanandini.com/fullupanyasa.php?serialnumber=VNU119**

## ಪಾರಣೆಯ ವಿಚಾರ

ಕೃಷ್ಣಜಯಂತಿ ಬಂದಾಗ,  ಅಷ್ಟಮೀ ತಿಥಿ ಮತ್ತು ರೋಹಿಣೀ ನಕ್ಷತ್ರಗಳು ಮುಗಿದ ನಂತರ ಪಾರಣೆ ಎನ್ನುವದು ಶಾಸ್ತ್ರಗಳ ನಿರ್ಣೀತ ತತ್ವ.

ಈ ಬಾರಿ ಸೋಮವಾರ ಸಂಜೆ 5-29ಕ್ಕೆ ರೋಹಿಣೀ ಮುಗಿಯುತ್ತಿರುವದರಿಂದ ಆ ನಂತರದಲ್ಲಿ ಪಾರಣೆ ಮಾಡಬೇಕು. ಮೊದಲೇ ಅಡಿಗೆ ಮಾಡಿ, ರೋಹಿಣೀ ಮುಗಿದ ತಕ್ಷಣ ದೇವರಿಗೆ ನೈವೇದ್ಯಾದಿಗಳನ್ನು ಮುಗಿಸಿ ಪಾರಣೆಯನ್ನು ಮಾಡಬೇಕು.

## ಅಶಕ್ತರು ಪ್ರಾತಃಪಾರಣೆಯನ್ನು ಮಾಡಬಹುದು

ಬಾಲಕರು, ಗರ್ಭಿಣಿಯರು, ಬಾಣಂತಿಯರು, ವೃದ್ಧರು, ಖಾಯಿಲೆ ಇರುವವರು  ಇಷ್ಟು ದೀರ್ಘ ಉಪವಾಸ ಮಾಡಲು ಸಾಧ್ಯವಿಲ್ಲದಾಗ ಪ್ರಾತಃಕಾಲದಲ್ಲಿಯೇ ಪಾರಣೆಯನ್ನು ಮಾಡಬಹುದು ಎಂದು ಶ್ರೀಕೃಷ್ಣಾಚಾರ್ಯರು ನಿರ್ಣಯಿಸಿದ್ದಾರೆ, ಅಷ್ಟೇ ಅಲ್ಲ ಶ್ರೀ ಶ್ರೀಪಾದರಾಜಸಂಸ್ಥಾನದಲ್ಲಿ ಇದೇ ಪ್ರಾತಃಪಾರಣೆಯ ಸಂಪ್ರದಾಯವಿದೆ ಎಂದು ತಿಳಿಸಿದ್ದಾರೆ.

पारणे सम्प्रदायभेदः —
अन्यत्र  “याः काश्चित् तिथयः प्रोक्ताः पुण्यनक्षत्रसंयुताः। ऋक्षान्ते पारणं कुर्याद्  विना श्रवणरोहिणी”  इत्यभिधानात्।

बालवृद्धातुराश्रान्ताद्यशक्तविषये तु “यामत्रयादुपरि चेत् प्रातरेव हि पारणम्” इति “तथा उपवासेषु सर्वेषु पूर्वह्ने पारणं स्मृतम्” इति वा तिथिनक्षत्रयोरुभयोरनुवर्तमानयोः परेद्युर्देवं सम्पूज्य प्रातः क्रियमाणं पारणं न दुष्यति।

एतद् घट्टोपरिस्थितश्रीपादरायसम्प्रदाय इति। मठत्रयस्थानां तु तिथिनक्षत्रसंयोगे उभयोरन्त जन्माष्टम्यां तु तिथ्यन्त एव पारणमिति सम्प्रदायश्च। "तिथ्यन्ते चोत्सवान्ते च व्रती कुर्वीत पारणम्" इति स्मरणस्य परेद्युर्देवपूजान्त एवोत्सवान्त इत्यर्थः।

ಹೀಗಾಗಿ ಅತ್ಯಂತ ಅಶಕ್ತರು ಪ್ರಾತಃಪಾರಣೆಯನ್ನು ಮಾಡಬಹುದು. ಶ್ರೀಪಾದರಾಜಸಂಸ್ಥಾನದ ಶಿಷ್ಯರೂ ಸಹ ಪ್ರಾತಃಪಾರಣೆಯನ್ನು ಮಾಡಬಹುದು. ಶ್ರೀಮದ್ ವ್ಯಾಸರಾಜಸಂಸ್ಥಾನದಲ್ಲಿ ಪ್ರಾತಃಪಾರಣೆಯಿಲ್ಲ ಎಂದು ವಿದ್ಯಾಕರ್ಣಾಟಕಸಿಂಹಾಸನದ ಸಂಪ್ರದಾಯಪ್ರವರ್ತಕರಾದ ಶ್ರೀ ರಾಮಚಂದ್ರತೀರ್ಥಗುರುಸಾರ್ವಭೌರನ್ನು ಸಾಕ್ಷಾತ್ತಾಗಿ ಕಂಡಿದ್ದಂತಹ ಶ್ರೀ ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ಈಗ ವ್ಯಾಸರಾಜಮಠದಲ್ಲಿಯೂ ಪ್ರಾತಃಪಾರಣೆಯನ್ನು ಅನುಸರಿಸುತ್ತಾರೆ. ಶ್ರೀಪಾದರಾಜಮಠದ ಸಂಪ್ರದಾಯ ವ್ಯಾಸರಾಜಮಠದಲ್ಲಿ ಯಾವಾಗಿನಿಂದ

ಆರಂಭವಾಯಿತು ಎನ್ನುವದು ಸಂಶೋಧಿಸಬೇಕಾದ ವಿಷಯ.

ತಿಥಿ ಮತ್ತು ನಕ್ಷತ್ರಗಳು ಮುಗಿದ ನಂತರ ಮಾಡುವ ಪಾರಣೆ ಪೂರ್ಣ ಫಲವನ್ನು ನೀಡುತ್ತದೆ. ಸಾಮರ್ಥ್ಯವುಳ್ಳವರು ಅದನ್ನೇ ಆಚರಿಸತಕ್ಕದ್ದು. ಶ್ರೀ ವಾದಿರಾಜಗುರುಸಾರ್ವಭೌಮರೂ ತಿಥಿ-ನಕ್ಷತ್ರ ಮುಗಿದ ನಂತರದ ಪಾರಣೆಯನ್ನೇ ಸಮರ್ಥಿಸುತ್ತಾರೆ. ಇದೇ ಪ್ರಧಾನ ಪಕ್ಷ.

ಆದರೆ ಅತ್ಯಂತ ಅನಿವಾರ್ಯಪರಿಸ್ಥಿತಿ ಇರುವ ಸಜ್ಜನರು, ಮತ್ತು ಉತ್ಸವಾಂತೇ ಪಾರಣದ ನಿಯಮವಿರುವ ಕುಲದವರು ಪ್ರಾತಃಪಾರಣೆಯನ್ನು ಮಾಡಿದರೆ ದೋಷವಿಲ್ಲ.

ಇದು ಪಾರಣೆಯಲ್ಲಿ ನೇರವಾಗಿ ವಿಕಲ್ಪವಲ್ಲ[1]. ಶಕ್ತಿ ಮತ್ತು ಸಂಪ್ರದಾಯದ ಅನುಸಾರವಾಗಿ ವ್ಯವಸ್ಥಿತ ವಿಕಲ್ಪ. ವೇಧದ ಸಮಯದಲ್ಲಿ ಹೇಗೆ

---

[1] ಪಾರಣೆಯಲ್ಲಿ ವಿಕಲ್ಪವಿಲ್ಲ ಎಂದು ಬನ್ನಂಜೆ ವಿಮರ್ಶ ಪುಸ್ತಕದಲ್ಲಿ ಪ್ರತಿಪಾದಿಸಿದ್ದೇನೆ. ಅಶಕ್ತರಿಗೆ ಮತ್ತು ಉತ್ಸವಾಂತೇ ಪಾರಣ ಮಾಡುವವರಿಗೆ ಇರುವ ಸಂಪ್ರದಾಯಭೇದ.

ಅಶಕ್ತರಿಗೊಂದು ನಿಯಮ, ಶಕ್ತರಿಗೊಂದು ನಿಯಮ ಹಾಗೆ ಇದು.

ಶಕ್ತರು ತಿಥಿ ನಕ್ಷತ್ರಗಳು ಮುಗಿದ ನಂತರವೇ ಮಾಡತಕ್ಕದ್ದು. ಅಶಕ್ತರು ಪ್ರಾತಃಪಾರಣೆಯನ್ನು ಮಾಡಬಹುದು.

ಇನ್ನು ಉತ್ಸವಾಂತೇ ಪಾರಣದ ನಿಯಮವಿರುವವರು, ಉತ್ಸವ ಮುಗಿಯುವ ಸಮಯಕ್ಕೆ ಅರ್ಧರಾತ್ರಿ ಮೀರಿರುವದರಿಂದ, ರಾತ್ರಿ ಮಾಡಲಾಗುವದಿಲ್ಲ. ಹೀಗಾಗಿ ಪ್ರಾತಃಕಾಲದಲ್ಲಿ ಪಾರಣೆಯನ್ನು ಮಾಡಬಹುದು.

ಕೃಷ್ಣಜಯಂತಿಯ ಉಪವಾಸ ಇಪ್ಪತ್ತುಕೋಟಿ ಉಪವಾಸಗಳ ಫಲವನ್ನು ನೀಡುವ ಮಹಾ ಸತ್ಕರ್ಮ. ಹೀಗಾಗಿ ಸರಿಯಾಗಿ ತಿಳಿದು, ಸಂಕಲ್ಪಪೂರ್ವಕವಾಗಿ, ಸಮರ್ಪಣಾಂತಕವಾಗಿ ಅನುಸಂಧಾನಭರಿತವಾಗಿ ಆಚರಿಸಬೇಕು.

## ಸಮಗ್ರ ಆಚರಣೆಯ ಸಮಯಗಳು

ಭಾನುವಾರ ಪ್ರಾತಃಕಾಲದಲ್ಲಿ ಸ್ನಾನ, ಕೃಷ್ಣಾಷ್ಟಮಿಯ ಸಂಕಲ್ಪ. ಇಡಿಯ ದಿವಸ ಉಪವಾಸ, ಭಾಗವತಾದಿಗಳ ಶ್ರವಣ, ದೇವರ ನೈವೇದ್ಯಕ್ಕೆ ಸಿದ್ಧತೆಗಳು.

ರಾತ್ರಿ ಸುಮಾರು ಒಂಭತ್ತು ಹತ್ತು ಗಂಟೆಗೆ ಸ್ನಾನ. ದೇವರ ಪೂಜೆ. ಪಂಚಾಮೃತ ಅಭಿಷೇಕ. ಬೆಣ್ಣೆಯ ಸಮರ್ಪಣೆ. ಸಹಸ್ರನಾಮಾರ್ಚನೆ. ನೈವೇದ್ಯ. ಚಂದ್ರೋದಯವಾದ ಬಳಿಕ ಅರ್ಘ್ಯಪ್ರದಾನ.

ಮಾರನೆಯ ದಿವಸ, ಅಂದರೆ ಸೋಮವಾರ ಸಂಜೆ 5-30 ರ ನಂತರ ಪಾರಣೆ.

ಅತ್ಯಂತ ಅಶಕ್ತರು ಬೆಳಿಗ್ಗೆಯೇ ಪೂಜೆ ಮುಗಿಸಿ ಪಾರಣೆ ಮಾಡಬಹುದು.  ಸಮರ್ಥರು ಸಂಜೆಯವರೆಗೆ ಪೂರ್ಣ ಉಪವಾಸವಿದ್ದು ಪೂಜೆ ಮಾಡಿ ಪಾರಣೆ ಮಾಡಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491